2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ

**<u>ಎಂ.ವಿ.ಸಿ.239/2021</u>**

ದಿಃ17.05.2024
ಪ್ರಾಸಾ-4

| | |
|---|---|
| ಹೆಸರು | : ಧನಂಜಯ |
| ತಂದೆಯ ಹೆಸರು | : ಕೆ.ಟಿ.ಸಿದ್ದೇಗೌಡ |
| ವಯಸ್ಸು | : 42 |
| ಉದ್ಯೋಗ | : ರಿಯಲ್ ಎಸ್ಟೇಟ್ ವ್ಯವಹಾರ |
| ವಾಸ | : ಕುರುಬರಹಳ್ಳಿ |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
<u>ಮುಖ್ಯವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ</u>

ನಾನು ಈ ಪ್ರಕರಣದಲ್ಲಿ ಅರ್ಜಿದಾರನ ಪರ ಸಾಕ್ಷಿದಾರನಿದ್ದು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷ್ಯದ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ ಮತ್ತು ಅದಕ್ಕೆ ರುಜು ಮಾಡಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಕೆಎಂಆರ್, **1** ಮತ್ತು **3** ನೇ ಎದುರುದಾರರ ಪರವಾಗಿ</u>

ದಿಃ21.09.2020 ರಂದು 3 ನೇ ಎದುರುದಾರರು ತಮ್ಮ ವಾಹನ ಸಂಖ್ಯೆ-ಕೆಎ-42-ವೈ-8755 ನ್ನು ಸಂಚಾರಿ ನಿಯಮಾನುಸಾರ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಚಲಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಮೃತ ಚಂದ್ರಶೇಖರ್ ರವರು ತಮ್ಮ ವಾಹನ ಸಂಖ್ಯೆ-ಕೆಎ-05-ಇಎಫ್-0508 ರ ವಾಹನವನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆ ಅಪಘಾತ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೃತ ಚಂದ್ರಶೇಖರ್ ರವರು ನನ್ನ ಪರಿಚಯಸ್ಥರಾದ್ದರಿಂದ ಅವರ ಕುಟುಂಬದವರಿಗೆ ಅನುಕೂಲವಾಗಲೆಂದು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 3 ನೇ ಎದುರುದಾರರು ಅರ್ಜಿದಾರರಿಗೆ ನಷ್ಟ ಪರಿಹಾರವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

(ಕುಮಾರ್.ಹೆಚ್.ಎನ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.